**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 138 ಛಲವಾಧಿ ಜೆ.ಜೆ.ಆರ್ ನಗರ ಬೆಂಗಳೂರು
*******************************************************************************

ಸಂಖ್ಯೆ: W-138/Committee/Proceding -28/2021-22 dt. 06-12-2021

# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್–138

**06–12–2021 ರಂದು ಬೆಳಿಗ್ಗೆ 12.30 ಘಂಟೆಗೆ ವಾರ್ಡ್ ಸಂಖ್ಯೆ: 138 ಛಲವಾಧಿ ಪಾಳ್ಯ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮ್ಮದ್ ಜಾಫರ್ ಸಾದಿಕ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿ ನಿರ್ದೇಶಕರು (ನಗರ ಯೋಜನೆ–ದಕ್ಷಿಣ) ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 138 ರವರ** ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

## ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಳೆ ನೀರು ಚರಂಡಿಗಳನ್ನು ಪರಿವೀಕ್ಷಣೆ ಮಾಡಿ ಕೈಗೊಂಡಿರುವ ಕ್ರಮದ ಬಗ್ಗೆ ಸಭೆಯಲ್ಲಿ ವಿವರಣೆಯನ್ನು ಕೋರಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಸ್,ಡಬ್ಲ್ಯೂ.ಡಿ ಮೋರಿಗಳನ್ನು ಪರಿವೀಕ್ಷಣೆ ಮಾಡಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲ ಎಸ್ ಎಸ್.ಡಬ್ಲ್ಯೂ.ಡಿ ಮೋರಿಗಳು ಗೋಡೆಗಳು ಮತ್ತು ಫೇನ್ಸಿಂಗ್ ಸುರಕ್ಷಿತವಾಗಿರುವ ಬಗ್ಗೆ ವಿವರಣೆ ನೀಡಿದರು.

ಸಭಾ ಸದಸ್ಯರು ವಾರ್ಡ್ ವ್ಯಾಪ್ತಿಯ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು.

--2

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಸಿಮೆಂಟ್ ರಸ್ತೆ ಮತ್ತು ತಾರಿನ ರಸ್ತೆ ಗುಂಡಿಗಳನ್ನು ಗುರ್ತಿಸಿ, ಗುಂಡಿಗಳನ್ನು ಮುಚ್ಚಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತ ಮತ್ತು ಬಿ. ಖಾತಾದಲ್ಲಿ ನಿರ್ಮಾಣ ಮಾಡಿರುವ ಕಟ್ಟಡಗಳಿಗೆ ಮಾನ್ಯ ಆಯುಕ್ತರ ಆದೇಶದಂತೆ ನೋಟಿಸ್ ನೀಡಿದ್ದು ಹಾಗೂ ದಾಖಲೆಗಳನ್ನು ಪಡೆದಿರುವ ವಿವರಣೆ ಕೋರಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಬಿ. ಖಾತಾದಲ್ಲಿ ಮತ್ತು ನಕ್ಷೆ ಮಂಜೂರಾತಿ ಇಲ್ಲದೆ ಕಟ್ಟಡ ನಿರ್ಮಾಣ ಮಾಡಿರುವ ಕಟ್ಟಡಗಳಿಗೆ ಬಿ.ಬಿ.ಎಂ.ಪಿ ಕಾಯ್ದೆ 2020 ರ ಕಾಲಂ 313 ಪ್ರಕಾರ ಸುಮಾರು 31 ನೋಟೀಸ್ ಜಾರಿ ಮಾಡಿದ್ದು 313 ನೋಟೀಸ್ ಪಡೆದ ವ್ಯಕ್ತಿಗಳು ಕಛೇರಿಗೆ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರ ಗುಣಮಟ್ಟದ ಬಗ್ಗೆ ಸಭೆಯಲ್ಲಿ ವಿವರಣೆ ನೀಡುವಂತೆ ಕೋರಿದರು.

ಸಂಚಾಲಕರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿ ವಿವರಗಳನ್ನು ಸಭೆಯಲ್ಲಿ ತಿಳಿಸಿದರು ಹಾಗೂ ಸಮಯವನ್ನು ನಿಗಧಿಪಡಿಸಿ ಕಾಮಗಾರಿಗಳ ಪರಿವೀಕ್ಷಣೆಯ ನಡೆಸುವಂತೆ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಡಬ್ಲೂಎಸ್ಎಸ್‌ಬಿ ಕಛೆರಿಗೆ ವಾರ್ಡ್ 138 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್ಎಸ್‌ಬಿ ಅಧಿಕಾರಿಗಳು ವಾರ್ಡ್ 138 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಮಾನ್ಯ ಅಧ್ಯಕ್ಷರು ಕಂದಾಯ ಪರಿವೀಕ್ಷಕರನ್ನು ಮತದಾರರ ಗುರ್ತಿನ ಚೀಟಿಯ ಬಗ್ಗೆ ವಿವರಣೆ ಕೋರಿದರು.

ಸಂಬಂಧಿಸಿದ ಕಂದಾಯ ಅಧಿಕಾರಿಗಳು ಸಭೆಯಲ್ಲಿ ಮತದಾರರ ಗುರ್ತಿನ ಚೀಟಿ ಕರಡು ಪ್ರತಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಹಾಕಿ ತಿದ್ದುಪಡಿ ಮಾಡಲು ಹಾಗೂ ಹೊಸದಾಗಿ ಸೇರಿಸಲು ಅರ್ಜಿಯನ್ನು ಪಡೆಯುತ್ತಿರುವುದಾಗಿ ವಿವರಣೆ ನೀಡಿದ್ದರು

ಅಧ್ಯಕ್ಷರು ಕೋವಿಡ್-19 ಆರೋಗ್ಯ ಇಲಾಖೆಯವರಿಗೆ ಕೋವಿಡ್-19 ಇತ್ತೀಚೆಗೆ ಕೈಗೊಂಡ ಕ್ರಮಗಳ ಸಭೆಯಲ್ಲಿ ವಿವರಣೆ ಕೋರಿದರು

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿನಿಧಿಯು ಕೋವಿಡ್-19 ಎಮಿಕ್ರಾನ್ ಹೊಸ ತಳಿಯು ವೇಗವಾಗಿ ಹರಡುತ್ತಿದ್ದು ಆಶಾ ಕಾರ್ಯಕರ್ತೆಯರು ಮತ್ತು ಲಿಂಕ್ ವರ್ಕರ್ಸ್ ಪ್ರತಿ ಮನೆಗಳಿಗೆ ಖುದ್ದು ಬೇಟಿ ನೀಡಿ ಪ್ರತಿಯೊಬ್ಬರ ಆರೋಗ್ಯ ವಿಚಾರಿಸಿ ಹಾಗೂ ಅಗತ್ಯವಿದ್ದಲ್ಲಿ ಗಂಟಲು ಕಫದ ಪರೀಕ್ಷೆ ನಡೆಸುತ್ತಿರುವ ಬಗ್ಗೆ ತಿಳಿಸಿದರು ಹಾಗೂ ಲಸಿಕೆ ಪಡೆಯದವರಿಗೆ ಲಸಿಕೆ ಪಡೆಯಲು ಸೂಚಿಸುತ್ತಿರುತ್ತಾರೆ ಮತ್ತು ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -138ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿ ಬಗ್ಗೆ ಸಭೆಯಲ್ಲಿ ವಿವರಣೆ ನೀಡಿದರು

ಮಾನ್ಯ ಅಧ್ಯಕ್ಷರು ವಾರ್ಡ್-138ರ ವ್ಯಾಪ್ತಿಯಲ್ಲಿ ಕೋವಿಡ್-19 ಕಾಯಿಲೆಯಿಂದ ಸತ್ತವರ ಸಂಖ್ಯೆ ಮತ್ತು ಪರಿಹಾರಕ್ಕಾಗಿ ಬಂದಿರುವಂತಹ ಅರ್ಜಿಗಳ ವಿವರವನ್ನು ಕೋರಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ಛಲವಾಧಿಪಾಳ್ಯ ವ್ಯಾಪ್ತಿಯಲ್ಲಿ ಒಟ್ಟು 10 ಮೃತಪಟ್ಟಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅದರಲ್ಲಿ ಸುಮಾರು ವ್ಯಕ್ತಿಗಳು ಅರ್ಜಿಸಲ್ಲಿಸಿದ್ದು ಅದರಲ್ಲಿ ಕಂದಾಯ ಪರಿವೀಕ್ಷಕರು ತಮ್ಮ ಕಛೇರಿಗೆ 10 ಅರ್ಜಿಗಳು ಬಂದಿದ್ದು 4 ಅರ್ಜಿಗಳನ್ನು ಸ್ಥಳ ಮಹಾಜರು ಮಾಡಿ ಅರ್ಜಿಗಳನ್ನು ವಿಲೇವಾರಿ ಮಾಡಿರುವುದಾಗಿ ಸಭೆಯಲ್ಲಿ ತಿಳಿಸಿದರು

ಮಾನ್ಯ ಅಧ್ಯಕ್ಷರು ಕೋವಿಡ್-19 ಹೊಸ ತಳಿ ಎಮಿಕ್ರಾನ್ ನಿಂದ ಸರ್ಕಾರವು ಮಾಸ್ಕ್ ಧರಿಸದೆ ಸುತ್ತಡುತ್ತಿರುವರಿಗೆ ದಂಡ ವಿಧಿಸಿರುವ ವಿವರಣೆಯನ್ನು ಮಾರ್ಷಲ್ ಗಳಿಗೆ ಸಭೆಯಲ್ಲಿ ತಿಳಿಸುವಂತೆ ಸೂಚಿಸಿದರು.

ಮಾರ್ಷಲ್ ವಾರ್ಡ್-138 ರವರು ಮಾಸ್ಕ್ ಧರಿಸದವರಿಗೆ ಸುಮಾರು 5000 ದಂಡ ವಸೂಲಿಮಾಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

. ಮಾನ್ಯ ಸದಸ್ಯರು ವಾರ್ಡ್-138ರ ವ್ಯಾಪ್ತಿಯಲ್ಲಿ ಹಲವು ರೀತಿಯಲ್ಲಿ ಬೇಸ್ಕಾಂಗೆ ಸಂಬಂಧಿಸಿದ ದೂರುಗಳು ಬಂದಿರುವ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಾರ್ಯ ಪಾಲಕ ಅಭಿಯಂಣತರರು(ಬೆಸ್ಕಾಂ) ರವರ ಪ್ರತಿನಿದಿಯು ನಮ್ಮ ಕಛೇರಿಗೆ ಬಂದಿರುವ ದೂರನ್ನು ತುರ್ತು ಕ್ರಮ ಕೈಗೊಡಿರುವುದಾಗಿ ಸಭೆಯಲ್ಲಿ ವಿವರಣೆ ನೀಡಿದರು.

ಕಮೀಟಿ ಸದಸ್ಯರು ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಕಟ್ಟಡ ತ್ಯಾಜ್ಯಗಳನ್ನು ಸುರಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಎಲ್ಲ ಕಟ್ಟಡ ತ್ಯಾಜ್ಯಗಳನ್ನು ತೆರವು ಮಾಡಿರುವುದಾಗಿ ಸಭೆಯಲ್ಲಿ ತಿಳಿಸಿದರು

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಶ್ರೀ. ಮೊಹಮ್ಮದ್ ಜಾಫರ್ ಸಾದಿಕ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿ ನಿರ್ದೇಶಕರು (ನಗರ ಯೋಜನೆ-ದಕ್ಷಿಣ) ದೂ.ಸಂಖ್ಯೆ | ಅಧ್ಯಕ್ಷರು | (ಸಹಿ) |
| 2 | ಶ್ರೀ ಗಿರಿಧರ್. ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ: 138. ಬಿ.ಬಿ.ಎಂ.ಪಿ. ದೂ. 8618436036 | ಸದಸ್ಯ ಕಾರ್ಯದರ್ಶಿ | (ಸಹಿ) |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ -138 | ಸದಸ್ಯರು | H. Latha |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ(ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ಪ್ರತಿನಿಧಿ ದೂ. 9342582372 ಶ್ರೀ ಬಾಬು (ಕೆಲಸ ಪರಿವೀಕ್ಷಕರು) | ಸದಸ್ಯರು | V.B |
| 5 | ಆರೋಗ್ಯಾಧಿಕಾರಿಗಳು. ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ದೂ. 9845563157 | ಸದಸ್ಯರು | H. Latha |
| 6 | ಶ್ರೀ ಮೊಹಮದ್ ಸಾಧೀಕ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ ನಂ. 9945373444 | ಸದಸ್ಯರು | for Tabrez |
| 7 | ಶ್ರೀ ಮುಸ್ತಕ್ ಶರೀಫ್ ದೂ. 9880960040 ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ | ಸದಸ್ಯರು | (ಸಹಿ) |
| 8 | ಶ್ರೀ ಶಿವಯ್ಯ (ಆರ್.ಐ) 9480685303 ಕಂದಾಯ ಪರಿವೀಕ್ಷಕರು | ಸದಸ್ಯರು | |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ ಗೀತಾ ಹೆಚ್, ದೂ. 9986537126 | ಸದಸ್ಯರು | H. Latha |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ ( ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ | ಸದಸ್ಯರು | (ಸಹಿ) |
| 11 | ಸಹಾಯಕ ಕಾರ್ಯ ಪಾಲಕ ಅಭಿಯಂಣತರರು . (ಬೇಸ್ಕಾಂ)ರವರ ಪ್ರತಿನಿಧಿ | ಸದಸ್ಯರು | (ಸಹಿ) |

ಸಹಾಯಕ ಇಂಜಿನಿಯರ್ (
ಕಾ & ಪಾ ಘಟಕ-8,
ಬೆ.ವಿ.ಕಂ., ಪಶ್ಚಿಮ 3ನೇ ಉಪ-ವಿ
ಗೋರಿಪಾಳ್ಯ, ಬೆಂಗಳೂರು-5

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 138
ವಾರ್ಡ್ ಹಂತದ ಸಮಿತಿ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 138